## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ **361/2021**

**ಸಿ.ಡಬ್ಲೂಃ 11 ಪಿಡಬ್ಲೂಃ02**

ಸಾಕ್ಷಿದಾರರ ಹೆಸರುಃ ಚೆನ್ನವಿರೇಶ ತಂದೆಃ ನಿಂಗಪ್ಪ
ವಯಸ್ಸುಃ 38 ವರ್ಷ
ಉದ್ಯೋಗಃ ವ್ಯವಸಾಯ,
ಸಾಕೀನಃ ಸೋವೆನಹಳ್ಳಿ

ದಿಃ **02-06-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯವಿಚಾರಣೆ ಸ.ಸ.ಅ ರವರಿಂದಃ**

**01.**ನಾನು ಆರೋಪಿಯನ್ನು ನೋಡಿರುತ್ತೇನೆ. ಆತನು ನಮ್ಮ ಗ್ರಾಮದಲ್ಲಿ ಟ್ಯಾಕ್ಟರ ಚಾಲಕನಾಗಿರುತ್ತಾನೆ. ಚಾ.ಸಾ.01 ರಿಂದ 10 ಮತ್ತು 12, 13 ರವರ ಪರಿಚಯ ಇರುತ್ತದೆ.

**02.** ದಿ.20-01-2021 ರಂದು ಸಂಜೆ.06.30 ಗಂಟೆಗೆ ನಾನು ನಮ್ಮ ಹಳೆ ಸೋವೆನಹಳ್ಳಿ ಗ್ರಾಮದಿಂದ ಸೋವೆನಹಳ್ಳಿ ತಾಂಡಾಕ್ಕೆ ಶುದ್ದ ಕುಡಿಯುವ ನೀರಿಗಾಗಿ ಹೋಗುತ್ತಿದ್ದೇನು. ಹೊಸ ಊರಿನ ಜೋಡಿ ಹನುಮಪ್ಪನ ಗುಡಿಯ ಹತ್ತಿರ ಟ್ಯಾಕ್ಟರ ಮತ್ತು ಬೈಕಿಗೆ ಅಪಘಾತವಾಗಿತ್ತು. ಆಗ ನಾನು ನನ್ನ ಬೈಕನ್ನು ನಿಲ್ಲಿಸಿ ನೋಡಲಾಗಿ ಬೈಕ ಸವಾರನಿಗೆ ರಕ್ತಗಾಯಗಳಾಗಿದ್ದವು. ಆಗ ಚಾ.ಸಾ.10 ರವರು ಚಾ.ಸಾ.01 ರವರನ್ನು ಕರೆದುಕೊಂಡು ಬಂದು ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಹಡಗಲಿ ಸರ್ಕಾರಿ ಆಸ್ಪತ್ರೆಯಲ್ಲಿ ಗಾಯಾಳುವನ್ನು ಚಿಕಿತ್ಸೆಗಾಗಿ ದಾಖಲೆ ಮಾಡಿಕೊಂಡಿರಲಿಲ್ಲ. ಆದ್ದರಿಂದ ದಾವಣಗೇರೆಗೆ ಕರೆದುಕೊಂಡು ಹೋಗಿರುತ್ತಾರೆ. ಅದೇ ದಿನ ರಾತ್ರಿ 11.00 ಗಂಟೆ ಸುಮಾರಿಗೆ ಚಿಕಿತ್ಸೆ ಫಲಕಾರಿ ಆಗದೇ ದಾವಣಗೇರೆ ಆಸ್ಪತ್ರೆಯಲ್ಲಿ ಗಾಯಾಳು ಮೃತ ಹೊಂದಿರುತ್ತಾನೆ.

**03.** ದಿ.21-01-2021 ರಂದು ಬೆ.10.30 ಗಂಟೆಯಿಂದ 12.00 ಗಂಟೆಯವರೆಗೆ ಜೋಡಿ ಹನುಮಪ್ಪನ ಗುಡಿಯ ಹತ್ತಿರ ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ನಕ್ಷೆ ತಯಾರಿಸಿ ಫೊಟೋ ತೆಗೆದಿರುತ್ತಾರೆ. ಚಾ.ಸಾ.01 ರವರು 1 ನೇ ಆರೋಪಿಯ ವಿರುದ್ಧ ದೂರು ನೀಡಿರುತ್ತಾರೆ. ಸಾಕ್ಷಿಗೆ ಕೃತ್ಯ ಸ್ಥಳದ ಪಂಚನಾಮೆಯನ್ನು ತೋರಿಸಿ ಅದನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ

ಪಂಚನಾಮೆಯನ್ನು ನಿ.ಪಿ.**02** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**02** ಎ. ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಚ್ಛಾ ನಕಾಶೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಕಚ್ಛಾನಕಾಶೆಯನ್ನು ನಿ.ಪಿ.**03** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**03** ಎ. ಎಂದು ಗುರುತಿಸಲಾಯಿತು. ಸಾಕ್ಷಿಗೆ **2** ಛಾಯಾ ಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದರಿಂದ ಸದರಿ ಛಾಯಾ ಚಿತ್ರಗಳನ್ನು ನಿ.ಪಿ.**04** ಮತ್ತು **05** ಎಂದು ಗುರುತಿಸಲಾಯಿತು.

*(ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸ.ಸ.ಅ ವಕೀಲರು ಪಾಟೀ ಸವಾಲನ್ನು ಮಾಡಲು ನ್ಯಾಯಾಲಯದ ಅನುಮತಿ ಕೋರಿದ್ದು ಅನುಮತಿಯನ್ನು ನೀಡಿರುತ್ತಾರೆ.)*

ಪಾಟೀ ಸವಾಲುಃ ಸ.ಸ.ಅ ರವರಿಂದ ;

**04.** ದಿ.**20-01-2021** ರಂದು ರಾತ್ರಿ **07.30** ಗಂಟೆ ಸುಮಾರಿಗೆ ನಾನು ಮತ್ತು ಚಾ.ಸಾ.**10** ರವರು ನಮ್ಮ ಗ್ರಾಮದ ಹೊಸ ಪ್ಲಾಟನಿಂದ ಹಳೆ ಊರಿಗೆ ಹೋಗುವ ರಸ್ತೇಯಲ್ಲಿ ಜೋಡಿ ಆಂಜನೇಯ ಗುಡಿಯ ಹತ್ತಿರ ಇದ್ದೇವು ಎಂದರೆ ಸರಿ. ಆ ಸಮಯದಲ್ಲಿ ಮೃತ ಸಂತೋಷನು ತನ್ನ ದ್ವಿಚಕ್ರ ವಾಹನ ಹೆಚ್ಟ್. ಎಫ್. ಡಿಲಕ್ಸ ಮೋಟರ ಸೈಕಲನಲ್ಲಿ ಹೊಸ ಪ್ಲಾಟ ಕಡೆಗೆ ಬರುತ್ತಿದ್ದನು ಎಂದರೆ ಸರಿ. ಆ ಸಮಯದಲ್ಲಿ ಸಂತೋಷನ ದ್ವಿಚಕ್ರ ವಾಹನಕ್ಕೆ ಎದುರಾಗಿ ಹಳೆ ಊರಿನ ಕಡೆಗೆ ಹೊರಟಿದ್ದ **1** ನೇ ಆರೋಪಿ ತನ್ನ ಟ್ರ್ಯಾಕ್ಟರ ನಂಬರ **KA.35.TA.3577** ಮತ್ತು ಅದಕ್ಕೆ ಲಗತ್ತಾದ ಟ್ರ್ಯಾಲಿ ನಂಬರ **KA.35.TA.3578** ನೇದ್ದನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಸಂತೊಷನ ಮೋಟರ ಸೈಕಲಗೆ ಡಿಕ್ಕಿ ಹೊಡೆಸಿರುತ್ತಾನೆ ಎಂದರೆ ಸರಿ. ಸದರಿ ಅಪಘಾತದಿಂದ ಮೃತ ಸಂತೋಷನಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿ ಮುಖಕ್ಕೆ, ತಲೆಗೆ ಬಾರಿ ಪೆಟ್ಟು ಬಿದ್ದು ಎರಡು ಕಿವಿಗಳಿಂದ ರಕ್ತ ಸೋರುತ್ತಿತ್ತು ಎಂದರೆ ಸರಿ. ಆಗ ಚಾ.ಸಾ.**10** ರವರು ಚಾ.ಸಾ.**01** ರವರಿಗೆ ಸದರಿ ಅಪಘಾತದ ಕುರಿತು ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ಅಗ ಚಾ.ಸಾ.**01, 06, 12** ಮತ್ತು **13** ರವರು ಹಡಗಲಿ ಸರ್ಕಾರಿ ಆಸ್ಪತ್ರೆಗೆ

ಗಾಯಾಳುವನ್ನು ದಾಖಲಿಸಿ, ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೇರೆಗೆ ಹೋಗಲು ತಿಳಿಸಿದ್ದರಿಂದ ಚಾ.ಸಾ.**4** ಮತ್ತು **7** ರವರು ಗಾಯಾಳುವನ್ನು ದಾವಣಗೇರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಸದರಿ ಅಪಘಾತಕ್ಕೀಡಾದ ಸಂತೋಷನ ದ್ವಿಚಕ್ರ ವಾಹನಕ್ಕೆ ನೊಂದಣಿ ಸಂಖ್ಯೆ ಇರಲಿಲ್ಲ ಆದರೆ ಚಾಸ್ಸಿ ನಂಬರ ನೋಡಲಾಗಿ **MBLHA11ATGGK02489** ಮತ್ತು ಇಂಜಿನ ನಂಬರ **HA11EJGGK02240** ಎಂದು ಇತ್ತು ಎಂದರೆ ಸರಿ. **1** ನೇ ಆರೋಪಿ ಸದರಿ ಅಪಘಾತವನ್ನು ಪಡೆಸಿ ಟ್ಯಾಕ್ಟರನ ಅಲ್ಲಿಯೇ ಬಿಟ್ಟು ಓಡಿ ಹೋಗಿದ್ದರು ಎಂದರೆ ಸರಿ. ಸದರಿ ಅಪಘಾತದಲ್ಲಿ ಗಾಯಗೊಂಡಿದ್ದ ಸಂತೋಷನು ಅದೇ ದಿನ ರಾತ್ರಿ **11.00** ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿರುತ್ತಾನೆ ಮತ್ತು ಸದರಿ ಅಪಘಾತದ ಕುರಿತು ಚಾ.ಸಾ.**01** ರವರು ದೂರು ಸಲ್ಲಿಸಿರುತ್ತಾರೆ ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**05.** ದಿ.**21-01-2021** ರಂದು ಬೆ.**10.00** ರಿಂದ **11.00** ಗಂಟೆ ಸುಮಾರಿಗೆ ನಾನು ತೋರಿಸಿದ ಸ್ಥಳದಲ್ಲಿ ಚಾ.ಸಾ.**06** ಮತ್ತು **07** ರವರ ಸಮಕ್ಷಮ ನಿ.ಪಿ.**02** ರಂತೆ ಸ್ಥಳ ಪಂಚನಾಮೆ ಜರೂಗಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಸಮಯದಲ್ಲಿ ನಿ.ಪಿ.**03** ರಂತೆ ಕಚ್ಚಾ ನಕಾಶೆ ಮತ್ತು ನಿ.ಪಿ.**04, 05** ರಂತೆ ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆ ಎಂದರೆ ಸರಿ. ನಾನು ಅಪಘಾತ ಪಡೆಸಿದ ಟ್ಯಾಕ್ಟರನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ. **SGR** ವಕೀಲರವರಿಂದ:</u>

**06.** ಅಪಘಾತವಾದ ಸಂದರ್ಭದಲ್ಲಿ ಫಿಲ್ಟರ ನೀರಿಗಾಗಿ ಹೋಗುತ್ತಿದ್ದೇನು. ನಾನು ಹೋಗವುವಷ್ಟರಲ್ಲಿ ಅಪಘಾತವಾಗಿರುತ್ತದೆ. ಯಾರು ಯಾವ ಗಾಡಿಯನ್ನು ಹೇಗೆ ಓಡಿಸಿಕೊಂಡು ಬಂದಿರುತ್ತಾರೆ ಎಂದು ನಾನು ನೋಡಿರುವುದಿಲ್ಲ ಎಂದರೆ ಸರಿ. ನಾನು ಹೋಗಿ ಮೃತ ಸಂತೋಷನನ್ನು ಮೇಲಕ್ಕೆ ಎತ್ತಿರುತ್ತೇನೆ ಹಾಗೂ ಉಪಚಾರ ಮಾಡಿರುತ್ತೇನೆ. ಉಪಚಾರ ಎಂದರೆ ಮೃತ ಸಂತೋಷನನ್ನು ಮೇಲಕ್ಕೆ ಎತ್ತಿ, ಕಿವಿ ಹಾಗೂ ತಲೆಯಿಂದ ರಕ್ತ ಸೋರುತ್ತಿತ್ತು, ನೀರು ಕುಡಿಸಿರುತ್ತೇನೆ ಹಾಗೂ ಅವರ ಮನೆಯವರಿಗೆ ಬರಲು ತಿಳಿಸಿರುತ್ತೇನೆ. ನನ್ನ ಜೊತೆ ಚಾ.ಸಾ.**10** ಎಂಬ ಹುಡುಗನನ್ನು ಇಟ್ಟುಕೊಂಡಿದ್ದು ಅವನನ್ನು ಮೃತ

ಸಂತೋಷರವರ ಅಣ್ಣ-ತಮ್ಮಂದಿರಾದ ಚಾಸಾ.01 ರವರನ್ನು ಕರೆದುಕೊಂಡು ಬರಲು ತಿಳಿಸಿರುತ್ತೇನೆ. ಚಾ.ಸಾ.10 ರವರ ಫೋನಿನಿಂದ ಮೃತ ಸಂತೋಷರವರ ತಂದೆಗೆ ಕರೆ ಮಾಡಲು ಚಾ.ಸಾ.10 ರವರಿಗೆ ತಿಳಿಸಿರುತ್ತೇನೆ.

**07.** ಮೃತ ಸಂತೋಷರವರ ಕುಟುಂಬಸ್ಥರು ಬರುವವರೆಗೆ ನಾನು ಅಲ್ಲಿ ಇದ್ದೇನು ಹಾಗೂ ಚಾ.ಸಾ.12 ರವರ ಕಾರಿನಲ್ಲಿ ಅವರನ್ನು ಹಾಕಿಕೊಂಡು ಹೋಗುವವರೆಗೆ ನಾನು ಇದ್ದೇನು. ದಿ.21-01-2021 ರಂದು ಬೆ.10.00 ಗಂಟೆಗೆ ಪೊಲೀಸರು ನನ್ನನ್ನು ಅಪಘಾತವಾದ ಸ್ಥಳಕ್ಕೆ ಬರಲು ಹೇಳಿರುತ್ತಾರೆ. ಹಡಗಲಿ ಪೊಲೀಸರು ನನ್ನ ಫೋನ ನಂಬರಿಗೆ ಕರೆ ಮಾಡಿ ನನ್ನನ್ನು ಅಪಘಾತವಾದ ಸ್ಥಳಕ್ಕೆ ಬರಲು ಹೇಳಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಮತ್ತು ಚಾ.ಸಾ.06 ರವರು ಅಲ್ಲಿ ಇದ್ದರು. ನಾನು ಸ್ಥಳಕ್ಕೆ ಹೋದ ಮೇಲೆ ಪಂಚನಾಮೆಯನ್ನು ಬರೆದಿರುತ್ತಾರೆ. ಪೊಲೀಸರು ಫೋಟೋ ತೆಗೆದಾಗ 1 ಸಹಿ, ಪಂಚನಾಮೆ ಮಾಡಿದ ನಂತರ 1 ಸಹಿ ಮತ್ತು ರೋಡಿನ ನಕ್ಷೆಗೆ ಒಂದು ಸಹಿಯನ್ನು ಮಾಡಿಸಿರುತ್ತಾರೆ. ಇದರ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ನೀರುವುದಿಲ್ಲ ಅಪಘಾತವಾದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ ಆದರೆ ಪಂಚನಾಮೆಯ ನಂತರ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಯಾವ ವಾಹನವು ಅತೀ ಜೋರಾಗಿ ಬಂದು ಅಪಘಾತವಾಗಿರುತ್ತದೆ ಎಂದು ನಾನು ನೋಡದೇ ಇರುವುದರಿಂದ ಇದರ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿ.

**08.** ಈ ದಿನ ಚಾ.ಸಾ.1 ರವರು ನಾನು ಜೊತೆಗ ಬಂದಿರುತ್ತೇವೆ ಎಂದರೆ ನಾನು ಮತ್ತು ಅವರು ಬೇರೆ ಬೇರೆಯಾಗಿ ಬಂದಿರುತ್ತೇವೆ. ಅಪಘಾತವನ್ನು ನೋಡದೇ ಚಾ.ಸಾ.1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ನಾನು ಯಾರ ಮಾತನ್ನು ಕೇಳಿರುವುದಿಲ್ಲ ನೋಡಿದ್ದನ್ನು ಹೇಳುತ್ತಿದ್ದೇನೆ. ಅಪಘಾತವಾದ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ, ಠಾಣೆಯಲ್ಲಿಯೇ ಎಲ್ಲವನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

<u>ನ್ಯಾಯಾಲಯದ ಪ್ರಶ್ನೆಗಳುಃ</u>

**ಪ್ರಶ್ನೇಃ ನೀವು ಅಪಘಾತವನ್ನು ಖುದ್ದಾಗಿ ನೋಡಿರುತ್ತೀರಾ?**

**ಉತ್ತರಃರಸ್ತೇಯಲ್ಲಿ ಹೋಗುವಾಗ ಮೃತ ಸಂತೋಷನು 50 ಮೀಟರ ನಮ್ಮ ಮುಂದೆ ಇದ್ದನು. ಆಗ ಟ್ರ್ಯಾಕ್ಟರ ಸಂತೋಷನಿಗೆ ಗುದ್ದಿರುತ್ತದೆ. ನಾವು ಟ್ರ್ಯಾಕ್ಟರ ನೋಡಿದ ನಂತರ ಅದು 2ನೇ ಆರೋಪಿತನ ಟ್ರ್ಯಾಕ್ಟರ ಎಂದು ಗೊತ್ತಾಗಿರುತ್ತದೆ.**

**ಪ್ರಶ್ನೇಃ ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ?**

**ಉತ್ತರಃ ಮೃತ ಸಂತೋಷನು ಎಡಗಡೆಗೆ ಹೋಗುತ್ತಿದ್ದನು. ಟ್ರ್ಯಾಕ್ಟರಗೆ ಒಂದು ಲೈಟು ಇರಲಿಲ್ಲ ಅದು ಹೇಗೆ ಬಂದು ಮೃತ ಸಂತೋಷನಿಗೆ ಗುದ್ದಿರುತ್ತದೆ ಎಂದು ಗೊತ್ತಿರುವುದಿಲ್ಲ ನಾವು ಹೋಗುವಷ್ಟರಲ್ಲಿ ಸಂತೋಷನು ಕೆಳಗೆ ಬಿದಿದ್ದನು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

ನನ್ನ ಸಮಕ್ಷಮ
**Sd/-**

**(ಶ್ರೀಮತಿ ಅಕ್ಷತಾ ಟಿ)**
ಜೆ.ಎಂ.ಎಫ್.ಸಿ., ನ್ಯಾಯಾಧೀಶರು,
ಹಡಗಲಿ.